# ರಂಗೋಲಿ

## ಬರೀ ಸಂಪ್ರದಾಯಕ್ಕಲ್ಲ.. ಕಲಿಕೆಗೂ!

ಸಾಂಪ್ರದಾಯಿಕ ರಂಗೋಲಿಯಲ್ಲಿ ಮಾರ್ಪಾಡಾಗಿದೆ. ಮನೆಯ ಮುಂದೆ ಅಲಂಕಾರಕ್ಕಾಗಿ ಬಣ್ಣಬಣ್ಣದ ಚಿತ್ತಾರ ಬಿಡಿಸುವ ಕೈಗಳಲ್ಲಿ ಇದೀಗ ಸಂಖ್ಯಾಕ್ಷರ ಕಲಿಕೆಯ ಹೊಸ ಮಾರ್ಗವಾಗಿ ರಂಗೋಲಿ ರೂಪುಗೊಂಡಿದೆ. ಹಲವು ವೈವಿಧ್ಯಗಳಲ್ಲಿ ಅಂಕೆಗಳು, ಇಂಗ್ಲಿಷ್ ಅಕ್ಷರಗಳು ವಿನ್ಯಾಸಗೊಂಡಿವೆ.

■ ಚಿತ್ರ-ಲೇಖನ: **ಕೆ. ಕುಸುಮ್**

ಸೃಜನಶೀಲ ಕಲೆ ರಂಗೋಲಿ ಸಾಂಪ್ರದಾಯಿಕ ಕಲೆ. ಅದು ಬಣ್ಣಬಣ್ಣದ ಚಿತ್ತಾರ, ಪರಿಕಲ್ಪನೆಯಲ್ಲಿ ಅರಳುವ ವಿನ್ಯಾಸ. ರಂಗೋಲಿಗೆ ವಿಭಿನ್ನ ಹೆಸರುಗಳಿವೆ. ತಮಿಳುನಾಡಿನಲ್ಲಿ 'ಕೋಲಮ್', ಆಂಧ್ರಪ್ರದೇಶದಲ್ಲಿ 'ಮುಗ್ಗೂ', ಕೇರಳದಲ್ಲಿ 'ಗೋಲಮ್ ಕೋಲಮ್', ರಾಜಸ್ತಾನದಲ್ಲಿ 'ಮಂದನ', 'ಅಲ್ಪನಾ', ಪಶ್ಚಿಮ ಬಂಗಾಳದಲ್ಲಿ 'ಅರಿಪ್ಣ', ಬಿಹಾರದಲ್ಲಿ, 'ಸಾತಿಯಾ', ಗುಜರಾತಿನಲ್ಲಿ 'ಚೌಕಪೂಜನ್'... ಬರೀ ಹೆಸರಿನಲ್ಲಷ್ಟೇ ಅಲ್ಲ; ನಮೂನೆಗಳು ಆಯಾ ಪ್ರಾದೇಶಿಕ, ಪ್ರಾಂತ್ಯಕ್ಕನುಸಾರವಾಗಿ ರೂಪುಗೊಂಡಿವೆ.

ದಿನ ನಿತ್ಯವೂ ಹಾಕುವ ಸರ್ವೇ ಸಾಮಾನ್ಯ ರಂಗೋಲೆಗಳು ಹಲವಾದರೆ, ಮತ್ತೆ ಕೆಲವು ಸಾಂಪ್ರದಾಯಿಕ ಸಂಭ್ರಮಾಚರಣೆಗೆ ಅನುಗುಣವಾಗಿ; ಮುಖ್ಯವಾಗಿ ಎಂದರೆ ನಾಗರಪಂಚಮಿಯಲ್ಲಿ ನಾಗದೇವರ ವಿನ್ಯಾಸ, ರಥಸಪ್ತಮಿಯಲ್ಲಿ ಸೂರ್ಯನಾರಾಯಣನ ರಥ, ಕೃಷ್ಣಜನ್ಮಾಷ್ಟಮಿಯಲ್ಲಿ ಪುಟ್ಟ ಹೆಜ್ಜೆಗಳು, ದೀಪಾವಳಿಯಲ್ಲಿ ದೀಪದ ರಂಗೋಲಿಗಳ ಮಧ್ಯೆ ಕಂಗೊಳಿಸುವ ದೀಪಾಲಂಕಾರ, ದುರ್ಗಾಪೂಜೆ, ವರಮಹಾಲಕ್ಷ್ಮೀಪೂಜೆ, ಓಣಂ.. ಹೀಗೆ ಹಬ್ಬಗಳಲ್ಲಿ ರಂಗೋಲಿ ಜನರಲ್ಲಿ ಸಂತೋಷ ಹಾಗೂ ಭಕ್ತಿ ಭಾವ ಬೆಳೆಸುತ್ತದೆ.

ಇದೀಗ ಈ ಕಲೆಯಲ್ಲಿ ಒಂದು ಹೊಸ ದೃಷ್ಟಿಕೋನ, ರಚನಾತ್ಮಕ ಭಾವನೆ, ವಿವೇಚನೆ, ಸಿಮೆಟ್ರಿ, ಕಾಂಪ್ಲೆಕ್ಸಿಟಿ ಎಲ್ಲಾ ಕಂಡು ಬರುತ್ತಿದೆ. ಈ ಕಲೆ ಎಲ್ಲರಿಗೂ ಉಪಯುಕ್ತವಾಗಿದ್ದು ಮನಸ್ಸಿಗೆ ಶಾಂತಿ, ಸಂತಸ, ಸಮಾಧಾನ ತಂದು ಕೊಡುತ್ತದೆ. ಜತೆಗೆ ಏಕಾಗ್ರತೆ ಹೆಚ್ಚಿಸಲು ಜ್ಞಾಪಕ ಶಕ್ತಿ ಹೆಚ್ಚಿಸಲು ಮನಸ್ಸಿಗೂ, ದೇಹಕ್ಕೂ ಇದೊಂದು ತರಹ ಕಸರತ್ತು.

### ಚಿಕ್ಕಮ್ಮನ ಸಲಹೆ

ಒಮ್ಮೆ ಮನೆಗೆ ಬಂದ ಪರಿಮಳ ಚಿಕ್ಕಮ್ಮ ನನ್ನ ಕಲ್ಪನೆಗಳನ್ನು ನೋಡಿ ಸಂತೋಷಗೊಂಡು 'ಈ ರಂಗೋಲಿ ಚಿತ್ತಾರಗಳು ಕೇವಲ ದೇವರ ಮನೆಗೆ ಸೀಮಿತವಾಗಬೇಕಾಗಿಲ್ಲ. ಇನ್‌ಸ್ಟ್ರುಮೆಂಟ್ ಬಾಕ್ಸ್ ಬಳಸಿಕೊಂಡು ಡ್ರಾಯಿಂಗ್ ಹಾಳೆಗಳ ಮೇಲೆ ರಂಗೋಲಿ ಬರೆಯಬಹುದು. ಜ್ಯುವೆಲ್ಲರಿ, ಸ್ಯಾರಿ ಡಿಸೈನ್ಸ್, ಮೆಹಂದಿ, ಕುಂದನ್ ಆರ್ಟ್ಸ್, ಟೆಂಪಲ್ ಆರ್ಟ್ಸ್, ಲೆಹಂಗಾ, ಸಿರಾಮಿಕ್ ಆರ್ಟ್ಸ್, ಎಂ.ಆರ್.ಪಿ ಬೋರ್ಡ್, ಗ್ಲಾಸ್ ಪೇಟಿಂಗ್, ಮದುವೆ ಮನೆಯಲ್ಲಿ ಬಳಸುವ ಕುಶಲ ಕಲೆಯ ವಿವಿಧ ವಸ್ತುಗಳು.. ಮುಂತಾದ ಹತ್ತು ಹಲವು ಕಲಾ ಪ್ರಕಾರಗಳಲ್ಲಿ ರಂಗೋಲಿಯ ನಕ್ಷೆಗಳನ್ನು ಬಳಸಬಹುದು' ಎಂದು ಸಲಹೆ ಮಾಡಿದರು.

ಈ ಸಲಹೆಯಂತೆ ರಂಗೋಲಿಯ ವಿನ್ಯಾಸಗಳನ್ನು ಹೇಗೆ ಹೇಗೆ ಅಳವಡಿಸಿಕೊಳ್ಳಬಹುದು ಎಂಬುದನ್ನು ವಿವರಿಸುವ ಸಲುವಾಗಿ ಮಾದರಿಗಳನ್ನು ನಿರ್ಮಿಸಿಕೊಂಡೆ. ನಮ್ಮ ನಾಡಿನ ಸುಪ್ರಸಿದ್ಧ ಚಿತ್ರಕಲಾವಿದರಾದ ರಾಧಾಕೃಷ್ಣಶಾಸ್ತ್ರಿಗಳು ವಿನ್ಯಾಸ,

